

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ದ್ರವ್ಯಶುದ್ಧಿ ಮತ್ತು ಚಿತ್ತಶುದ್ಧಿ

ವ್ಯಕ್ತಿ, ಕುಟುಂಬ, ಸಮಾಜ ಮತ್ತು ರಾಷ್ಟ್ರಮಟ್ಟದಲ್ಲಿ ಹಣದ ಗಳಿಕೆ, ಉಳಿಕೆ ಮತ್ತು ಬಳಕೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಎಲ್ಲ ಸ್ತರಗಳಲ್ಲಿಯೂ ಆರ್ಥಿಕ ಶಿಸ್ತು ಅತ್ಯಂತ ಮಹತ್ವಪೂರ್ಣವಾದುದು. ಆರ್ಥಿಕ ಅಶಿಸ್ತು ರಾಷ್ಟ್ರಮಟ್ಟದಲ್ಲಿ ಎಂತಹ ದುರಂತಕಾರಿ ಎಂಬುದಕ್ಕೆ ವಿಶ್ವದ ದೊಡ್ಡಣ್ಣನೆನಿಸಿದ ಅಮೆರಿಕಾ ದೇಶವು ಹಾಯ್ದು ಬಂದ ಮತ್ತು ಈಗ ಎರಡನೆಯ ಬಾರಿ ಎದುರಿಸುತ್ತಿರುವ ಆರ್ಥಿಕ ಹಿನ್ನಡೆ (recession) ಒಂದು ಉತ್ತಮ ಉದಾಹರಣೆಯಾಗಿದೆ.

ಯಾವುದೇ ವ್ಯಕ್ತಿ ಅದವಾ ಕುಟುಂಬಕ್ಕಾಗಲೀ, ಸಮಾಜ, ಸಂಘ-ಸಂಸ್ಥೆ ಅಥವಾ ದೇಶಕ್ಕಾಗಲೀ ದ್ರವ್ಯಶುದ್ಧಿ ಬಹಳ ಮುಖ್ಯ. ಬದುಕಿನ ಅನೇಕ ಸಮಸ್ಯೆಗಳಿಗೆ ಈ ದ್ರವ್ಯಶುದ್ಧಿ ಇಲ್ಲದಿರುವುದೇ ಕಾರಣ. ದ್ರವ್ಯಶುದ್ಧಿಗೆ ಚಿತ್ತಶುದ್ಧಿ ಆವಶ್ಯಕ. ಅದು ಕೇವಲ ಮಠ-ಮಂದಿರಗಳಿಗೆ ಹೋಗುವುದರಿಂದಾಗಲೀ, ಆಣೆ-ಪ್ರಮಾಣ ಮಾಡುವುದರಿಂದಾಗಲೀ ಸಿಗುವ ವಸ್ತುವಲ್ಲ, ಸತತ ಅಂತರಂಗದ ಸಾಧನೆಯಿಂದ ಮಾತ್ರ ಸಿದ್ಧಿಸಬಲ್ಲುದು. ಚಿತ್ತಶುದ್ಧಿಯಿಲ್ಲದೆ ದ್ರವ್ಯಶುದ್ಧಿಯನ್ನು ಸಾಧಿಸಲು ಬರುವುದಿಲ್ಲ. ಕೌಟುಂಬಿಕ ಜೀವನದಲ್ಲಿಯೇ ಆಗಲಿ, ರಾಷ್ಟ್ರ ಜೀವನದಲ್ಲಿಯೇ ಆಗಲಿ ಈ ದ್ರವ್ಯಶುದ್ಧಿಯ ಕೊರತೆ ಅಪಾರ ಸಂಕಷ್ಟಗಳಿಗೆ ಈಡುಮಾಡುತ್ತದೆ.

"ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ" ಎನ್ನುತ್ತಾರೆ ಕನಕದಾಸರು. ಆದರೆ ಈಗ ಕಾಲಮಾನ ಬದಲಾಗಿದೆ. ಎಲ್ಲರೂ ಕೇವಲ ಹೊಟ್ಟೆಗಾಗಿ ಮತ್ತು ಬಟ್ಟೆಗಾಗಿ ಮಾಡಿದ್ದರೆ ಯಾವ ಸಮಸ್ಯೆಯೂ ಇರುತ್ತಿರಲಿಲ್ಲ. ಮನುಷ್ಯನ ಹೊಟ್ಟೆಗೆ ಮತ್ತು ಬಟ್ಟೆಗೆ ಅಂದರೆ ಹೊಟ್ಟೆಯ ಹಸಿವನ್ನು ತಣಿಸಲು, ಮಾನ ಮರ್ಯಾದೆಗೆ ಬಟ್ಟೆಯನ್ನು ಧರಿಸಲು, ಮಳೆ-ಗಾಳಿ-ಚಳಿಗೆ ಬೆಚ್ಚನೆಯ ಹೊದಿಕೆಯನ್ನು ಹೊದೆಯಲು ಎಷ್ಟು ಬೇಕಾಗಬಹುದು? ಅಷ್ಟಕ್ಕಾಗಿ ಮನುಷ್ಯ ತನ್ನ ದುಡಿಮೆಯ ಸ್ವಲ್ಪ ಭಾಗವನ್ನು ಇರಿಸಿಕೊಂಡು, ಉಳಿದದ್ದನ್ನು ಸಮಾಜಕ್ಕೆ ನೀಡಿದ್ದರೆ ಸಮಾಜದ ಚಿತ್ರ ಹೇಗಿರುತ್ತಿತ್ತು! ನಮ್ಮ ಭೂಮಂಡಲದ ಮೇಲಿರುವ ಕೋಟ್ಯಂತರ ಜೀವರಾಶಿಗಳ ಹೊಟ್ಟೆಯೂ ತುಂಬಿ ದೂರದ ಗ್ರಹ



ನಕ್ಷತ್ರಗಳಲ್ಲಿ ಏನಾದರೂ ಜೀವರಾಶಿ ಇದ್ದರೆ ಅವುಗಳಿಗೂ ಸಾಕಾಗುತ್ತಿತ್ತು, ಅದಕ್ಕೂ ಮಿಕ್ಕಿ ಉಳಿಯುತ್ತಿತ್ತು! ಆದರೆ ಈಗ ಜನರಿಗಿರುವ ಹೊಟ್ಟೆ ಸಾಧಾರಣ ಹೊಟ್ಟೆಯಲ್ಲ; ಅದು ಬಕಾಸುರ ಜಠರ! ಎಷ್ಟು ಸುರಿದರೂ ತುಂಬದು! ಈ ಭೂಮಿಯ ಮೇಲಿರುವ ಎಲ್ಲ ನಿಧಿ ನಿಕ್ಷೇಪಗಳೂ ಸ್ವಾರ್ಥಿಜನರ ಹಿಂಗದ ಈ ಹಸಿವಿಗೆ ಸಾಕಾಗುತ್ತಿಲ್ಲ. ಇರುವುದೆಲ್ಲವೂ 'ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎಂಬಂತಾಗಿದೆ. ಇವತ್ತಿನ ಎಲ್ಲ ಸಮಸ್ಯೆಗಳಿಗೂ ಕಾರಣವೆಂದರೆ ಇಂತಹ ಹಣದ ಲೋಭ! ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನ್ನು ಬಿಡಬೇಕೆಂದು ಬೋಧಿಸಿದ ದೇವಮಾನವರೂ ತಮ್ಮ ಆಶ್ರಮಗಳಲ್ಲಿ ಲೆಕ್ಕವಿಲ್ಲದೆ ಕೂಡಿಟ್ಟ ಹಣ ಅವರ 'ಬೃಹತ್ ಸಂಸಾರ'ದವರು ಜೀವಮಾನವಿಡೀ ಸುಖವಾಗಿ ಉಂಡುಳಿದ ಅಮೂಲ್ಯ ನಿಧಿಯಾಗಿ ಅವರ ಕಾಲಾನಂತರ ಸಿಕ್ಕವರಿಗೆ ಸೀರುಂಡೆಯಾಗಿ ಸೂರೆ ಹೋಗುತ್ತಿರುವುದನ್ನೂ, ನಂಬಿದ ಭಕ್ತಜನರ ಶ್ರದ್ಧೆ ಜಾರಿಹೋಗುತ್ತಿರುವುದನ್ನೂ ಕಣ್ಣಾರೆ ಕಾಣುತ್ತಿದ್ದೇವೆ.

ಲೋಭಿ ತಾನು ಕೂಡಿಟ್ಟ ಹಣವನ್ನು ಭದ್ರವಾದ ತಿಜೋರಿಯಲ್ಲಿಟ್ಟು ನೋಡಿ ನೋಡಿ ಸಂತೋಷಪಡುತ್ತಾನೆ. ಕಳ್ಳರ ಅಥವಾ ತೆರಿಗೆ ಅಧಿಕಾರಿಗಳ ಕಣ್ಣಿಗೆ ಬೀಳಬಾರದೆಂಬ ಭೀತಿಯಿಂದ ಭೂಮಿಯಲ್ಲಿ ಹೂತಿಡುತ್ತಾನೆ. ತನ್ನ ಸ್ವಂತಕ್ಕಾಗಲೀ, ಕುಟುಂಬಕ್ಕಾಗಲೀ, ಸಮಾಜಕ್ಕಾಗಲೀ ಅದನ್ನು ಬಳಸುವುದಿಲ್ಲ. ಅಂಥವರನ್ನು ಕಂಡು ಬಸವಣ್ಣನವರು ಎಚ್ಚರಿಸುತ್ತಾರೆ:

**ಕಣ್ಣಿನಲಿ ನೋಡಿ, ಮಣ್ಣಿನಲಿ ನೆರಹಿ, ಉಣ್ಣದೆ ಹೋಗದಿರಾ!**

'ಮುಟ್ಟಿದ್ದೆಲ್ಲವೂ ಚಿನ್ನವಾಗಲಿ' ಎಂದು ದೇವತೆಯಿಂದ ವರವನ್ನು ಪಡೆದ ಮೈದಾಸನೆಂಬ ರಾಜ ತಾನು ಉಣ್ಣಬೇಕಾದ ಅನ್ನವೂ ಚಿನ್ನವಾದಾಗ, ತನ್ನ ಮುದ್ದಿನ ಮಗಳೂ ಸಹ ಚಿನ್ನದ ಪುತ್ಥಳಿಯಾದಾಗ ಅನುಭವಿಸಿದ ಬವಣೆಯ ಕಥೆ ಯಾರಿಗೆ ಗೊತ್ತಿಲ್ಲ! ಕಾಂಚನಮೃಗದ ಸೆಳೆತ ಮಹಾಸಾಧ್ವಿ ಸೀತೆಯನ್ನೂ ಬಿಡದೆ ರಾಮಾಯಣದ ಕಥೆಗೆ ಕಾರಣವಾಯಿತಲ್ಲವೆ?

ವ್ಯಕ್ತಿಗೆ ದ್ರವ್ಯಶುದ್ಧಿ ಇಲ್ಲದಿದ್ದರೆ ಕಲಹಕ್ಕೆ ಕಾರಣವಾಗುತ್ತದೆ. ಅವನು ಮನೆಯ ಯಜಮಾನನಾದರೆ ಕುಟುಂಬಗಳು ಹಾಳಾಗುತ್ತವೆ. ನಾಡಿನ ನೇತಾರನಾದರೆ ಸಮಾಜ ಮತ್ತು ರಾಷ್ಟ್ರಗಳು ಹಾಳಾಗುತ್ತವೆ. ದ್ರವ್ಯಶುದ್ಧಿ ಇಲ್ಲದ ಜನರು ರಾಜಕೀಯ ಮುಖಂಡರಾದರೆ ಏನೆಲ್ಲ ಆಗಬಹುದು ಎಂಬುದನ್ನು ನಿತ್ಯವೂ ಮಾಧ್ಯಮಗಳಲ್ಲಿ ಕಣ್ಣಿಗೆ ರಾಚುವಂತೆ ಬರುವ ಸುದ್ದಿಗಳು ಸಾರಿ ಹೇಳುತ್ತಿವೆ. ಲಕ್ಷಾಂತರ ಕೋಟಿ ಸಂಖ್ಯೆಯ ಸಾರ್ವಜನಿಕ ಹಣ

ಲೂಟಿಯಾಗುತ್ತಿದೆ. ಆಗಾಗ ಬೆಳಕಿಗೆ ಬರುವ ಹಗರಣಗಳು ನಾವಿಕರಿಗೆ ಸಮುದ್ರದ ನೀರಿನ ಮೇಲೆ ಕಾಣಿಸುವ ಹಿಮಪರ್ವತದ ತುತ್ತ ತುದಿಯಂತೆ (tip of the iceberg); ಅದರ ಆಳದಲ್ಲಿ ಹುದುಗಿರುವ ಅಗಾಧ ಹಿಮಪರ್ವತದ ಭಾಗ ಕಣ್ಣಿಗೆ ಅಗೋಚರ! ಅದು ಜಗತ್ತಿನಲ್ಲಿ ತನಗೆ ಸರಿಸಾಟಿ ಇಲ್ಲವೆಂದು ಮೆರೆಯುತ್ತಾ ಐಷಾರಾಮಜೀವನದ ವಿಲಾಸವಿಭ್ರಮಗಳಿಂದ ವಿಜೃಂಭಿಸುತ್ತಾ ಹೊರಟ 'ಟೈಟಾನಿಕ್' ಹಡಗು ರಾತ್ರೋರಾತ್ರಿ ಅಟ್ಲಾಂಟಿಕ್ ಸಾಗರದಲ್ಲಿ ಮುಳುಗಿದಂತೆ ಯಾವಾಗ ಜೀವನನೌಕೆಯನ್ನು ಮುಳುಗಿಸುತ್ತದೆಯೋ ಹೇಳಲಾಗದು.

ಸಾರ್ವಜನಿಕ ಜೀವನದಲ್ಲಿ ಇರುವವರು ಈ ವಿಷಯದಲ್ಲಿ ಹೇಗಿರಬೇಕೆಂಬುದಕ್ಕೆ ಬಸವಣ್ಣನವರು ಮೇಲ್ಪಂಕ್ತಿಯಾಗಿದ್ದಾರೆ. ಸಾರ್ವಜನಿಕರ ಹಣ ಸಾರ್ವಜನಿಕರಿಗೇ ಸಲ್ಲಬೇಕು. ಅದರಲ್ಲಿ ಚಿಕ್ಕಾಸೂ ಸ್ವಂತಕ್ಕೆ ದುರ್ಬಳಕೆಯಾಗಬಾರದು ಎಂಬುದು ಬಸವಣ್ಣನವರ ಜೀವನದ ಧ್ಯೇಯವಾಗಿತ್ತು. ಅವರ ಈ ಕೆಳಗಿನ ವಚನವನ್ನು ಗಮನಿಸಿ:

**ಕಾಂಚನವೆಂಬ ನಾಯ ನಚ್ಚಿ ನಿಮ್ಮ ನಾನು ಮರೆದೆನಯ್ಯಾ!**
**ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ.**
**ಹಡಿಕೆಗೆ ಮೆಚ್ಚಿದ ಸೊಣಗ**
**ಅಮೃತದ ರುಚಿಯ ಬಲ್ಲುದೆ ಕೂಡಲ ಸಂಗಮದೇವಾ?**

ನಾಯಿಗೆ ಅಮೃತ ರುಚಿಸುವುದಿಲ್ಲ. ಅದು ರಕ್ತಮಾಂಸಗಳಿಗೆ ಹಾತೊರೆಯುತ್ತದೆ. ಹಾಗೆಯೇ ಮನುಷ್ಯ ಹಣಸಂಪಾದನೆಗಾಗಿ ಮಾತ್ರ ಹಾತೊರೆದರೆ ಅವನ ಬಾಳು ನಾಯಿಬಾಳಿಗೆ ಸಮಾನ. ಈ ಒಳ ಎಚ್ಚರವಿದ್ದ ಬಸವಣ್ಣನವರಿಗೆ ಸಾಧನಾವಸ್ಥೆಯ ಮೆಟ್ಟಿಲುಗಳನ್ನು ಮೇಲೇರಿದಾಗ 'ಕೂಡಲಸಂಗಮದೇವರ ನೆನೆಯುವುದೇ' ಜೀವನದ ಉಸಿರಾಗುತ್ತದೆ. ಅಂತಹ ಚಿತ್ತಶುದ್ಧಿಯುಳ್ಳ ಬಸವಣ್ಣನವರ ಮೇಲೂ ಕಲ್ಯಾಣದಲ್ಲಿ ಮಹಾಮಂತ್ರಿಯಾಗಿದ್ದಾಗ "ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳಿರ್ದು ಓಲೈಸಿಹ"ನೆಂಬ ಆರೋಪ ಬಂದಿತ್ತು. ಆಗ ಅವರು ಕೊಟ್ಟ ದಿಟ್ಟತನದ ಉತ್ತರ:

**ಊರಮುಂದೆ ಹಾಲ ಹಳ್ಳ ಹರಿವುತ್ತಿರಲು,**
**ಓರೆಯಾವಿನ ಬೆನ್ನಲಿ ಹರಿಯಲದೇಕಯ್ಯಾ?**
**ಲಜ್ಜೆಗೆಡಲೇಕೆ? ನಾಣುಗೆಡಲೇಕೆ?**
**ಕೂಡಲ ಸಂಗಮದೇವರುಳ್ಳನ್ನಕ್ಕ**
**ಬಿಜ್ಜಳನ ಭಂಡಾರವೆನಗೇಕಯ್ಯಾ?**

ಊರ ಮುಂದೆ ಹಾಲಿನ ಹಳ್ಳವೇ ಹರಿಯುತ್ತಿರುವಾಗ ಹಸುವಿನ ಹಂಗೇಕೆ? ಸಕಲವನ್ನೂ ನೀಡುವ ದೇವರಿದ್ದಾನೆ. ಅಂತಹ ದೇವರನ್ನು ನಂಬಿದ ತನಗೆ ಬಿಜ್ಜಳನ ಭಂಡಾರವಾದರೂ ಏಕೆ ಬೇಕು ಎಂದು ಧೈರ್ಯವಾಗಿ ನುಡಿಯುತ್ತಾರೆ. ರಾಜಕೀಯದಲ್ಲಿದ್ದೂ ಬಸವಣ್ಣನವರು ಸಾಧಿಸಿದ್ದ ಈ ದ್ರವ್ಯಶುದ್ಧಿ ಇಂದು ಎಷ್ಟು ಜನ ರಾಜಕೀಯ ನೇತಾರರಿಗೆ ಇದೆ?

ಕೂಡಿಟ್ಟ ಹಣದ ರಕ್ಷಣೆಗಾಗಿ ಪ್ರಯತ್ನಿಸುವ ಲೋಭಿಯನ್ನು ನೆಲದಲ್ಲಿ ಹೂತಿಟ್ಟ ನಿಧಿಯನ್ನು ಕಾಯುವ ಭೂತಕ್ಕೆ ಹೋಲಿಸುತ್ತಾರೆ ಬಸವಣ್ಣನವರು:

**ನಿಧಾನವ ಕಾಯ್ದಿರ್ದ ಬೆಂತರನಂತೆ**
**ಅದರ ವಿಧಿ ಎನಗಾಯಿತ್ತು ಕೂಡಲ ಸಂಗಮದೇವಾ!**

ಈ ಮಾತನ್ನು ಬಸವಣ್ಣನವರು ನೇತ್ಯಾತ್ಮಕ ಅರ್ಥದಲ್ಲಿ ಹೇಳಿದ್ದಾರೆ. ಇದಕ್ಕೆ ಧನಾತ್ಮಕ ಮುಖವೂ ಇದೆ ಎಂಬುದನ್ನು ನಾವು ಅರಿಯಬೇಕು. ನೆಲದಲ್ಲಿ ಹೂತಿಟ್ಟ ನಿಧಿಯನ್ನು ಭೂತವು ಅನ್ಯರ ಅಪಾತ್ರರ ಕಳಕಾಕರ ಪಾಲಾಗದಂತೆ ಕಾಯುತ್ತದೆ. ಆದರೆ ತಾನು ಮಾತ್ರ ಅದನ್ನು ಅನುಭವಿಸುವುದಿಲ್ಲ. ಸಾರ್ವಜನಿಕ ಜೀವನದಲ್ಲಿರುವವರು ಹೀಗೆ ಬೆಂತರನಂತೆ ತಮ್ಮ ಸ್ವಾಧೀನದಲ್ಲಿರುವ ಸಾರ್ವಜನಿಕ ಸಂಪತ್ತನ್ನು ಸ್ವಂತಕ್ಕಾಗಿ ಅನುಭೋಗಿಸದೆ ಅನ್ಯಾಯವಾಗಿ ಪರರ ಪಾಲಾಗದಂತೆ ಕಾಯ್ದು ಕಾಪಾಡಿ ಜನರ ಒಳಿತಿಗಾಗಿ ಬಳಸುವ ಕಾರ್ಯದಲ್ಲಿ ನಿಷ್ಠೆಯಿಂದ ತಮ್ಮನ್ನು ತೊಡಗಿಸಿಕೊಳ್ಳಬೇಕಾಗಿದೆ. ಅದು ಇಂದೋ ನಾಳೆಯೋ ನಿವೃತ್ತರಾಗುವ ಲೋಕಾಯುಕ್ತರ ಭೀತಿಯಿಂದಲ್ಲ, ಸದಾ ತಮ್ಮ ಹೃದಯದೊಳಗೆ ಇರುವ ಲೋಕಪಾಲಕ ಭಗವಂತನು ನೋಡುತ್ತಾನೆಂಬ ಭಾವದಿಂದ:

**ಧನವನಿರಿಸದಿರಾ, ಇರಿಸಿದಡೆ ಭವ ಬಪ್ಪುದು ತಪ್ಪದು.**
**ಕೂಡಲ ಸಂಗನ ಶರಣರಿಗೆ ಸವೆಸಲೇಬೇಕು.**

11.8.2011

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ